

ಪಾತ್ರವೊಂದು ಅಚ್ಚಿನಲ್ಲಿ ಉಳಿಯುವಂತೆ ಬರವಣಿಗೆ ಮಾಡಿರುವ ಕಾರಂತರ ಜೀವನ ದೃಷ್ಟಿಕೋನ, ಅವರ ಮುನ್ನೋಟ ದೊಡ್ಡದು. ಬೆಟ್ಟದ ಜೀವ ಕಾದಂಬರಿಯ ಗೋಪಾಲಯ್ಯನ ಮೂಲಕ ಕಾರಂತರ ಜೀವನ ದೃಷ್ಟಿ ವಿನಯಭಾವದಿಂದ ಗೋಚರಿಸುತ್ತದೆ. ಈ ಕಾದಂಬರಿಯನ್ನು ಅವರು ಬರೆದದ್ದು 1941ರಲ್ಲಿ. ಇವತ್ತಿಗೆ 81 ವರ್ಷಗಳು ಸಂದರೂ ಆ ಕಾದಂಬರಿ, ಇಂದೇ ಬರೆದದ್ದೇನೋ ಎನ್ನುವ ನೆಲೆಯಲ್ಲಿ ಚರ್ಚಿತವಾಗುತ್ತಿರುವುದೇ ಈ ಮಾತಿಗೆ ದೊಡ್ಡ ಸಾಕ್ಷಿ. ಗೋಪಾಲಯ್ಯನಂಥವರನ್ನು ಇಂದಿಗೂ ನಾನು ನನ್ನ ಸುತ್ತ ಮುತ್ತಲಿನ ಸಮಾಜದಲ್ಲಿ ನೋಡುತ್ತಲೇ ಇದ್ದೇನೆ.

ಈ ಕೃತಿಯನ್ನು ತುಂಬಾ ಸಲ ಅದರಲ್ಲಿ ಬರುವ ಪ್ರಕೃತಿ ವರ್ಣನೆಯ ಖುಷಿಗಾಗಿ ಓದಿರುವೆ. ಪ್ರಾದೇಶಿಕತೆಯ ಸೊಗಸಿನ ಬಗ್ಗೆ, ಲೇಖಕರೇ ನಿರೂಪಕರಾಗಿ, ಪಾತ್ರಧಾರಿಯಾಗಿರುವುದರ ಬಗ್ಗೆ, ಸಂಬಂಧಗಳ ಕುರಿತು ಇರುವ ಜಿಜ್ಞಾಸೆಯ ಬಗ್ಗೆ – ಗಮನಹರಿಸಿ ವಿಶ್ಲೇಷಿಸಲಾಗಿದೆ. ಇವೆಲ್ಲದರ ಆಚೆ ಗೋಪಾಲಯ್ಯನ ಪಾತ್ರದ ಮೂಲಕ ಹುಡುಕಾಟದ ಪ್ರಜ್ಞೆಯೊಂದು, ನನಗೆ ಕಾಣಿಸಿದೆ. ಅಕ್ಕ ಹುಡುಕಿದ್ದು, ಅಲ್ಲಮ, ಬಸವಣ್ಣ, ಮಾಡಿದ್ದು ಈ ಹುಡುಕಾಟವೇ ಅಲ್ಲವೇ. ಗೋಪಾಲಯ್ಯನ ಮಗ ಶಂಭು ಸಹ ಓದಿದ ಮೇಲೆ ಮುಂಬೈಗೆ ಹೋಗಿದ್ದು ಅವನ ಅಂತರಂಗದಲ್ಲಿರುವ ಹುಡುಕಾಟದ ಗುಣಕ್ಕೆ ಇರಬೇಕು. ಆಧುನಿಕತೆಯ ಜಗತ್ತು ತುಂಬಾ ಬೆಡಗಿನಿಂದ ಕೂಡಿರುತ್ತದೆ. ಅದು ತುಂಬಾ ರೋಮ್ಯಾಂಟಿಸೈಸ್ ಆಗಿ ಕಾಣಿಸುತ್ತಾ ಇರುವ ಲೋಕ. ಪೂರ್ತಿಯಾಗಿ ನಮ್ಮನ್ನು ಸೆಳೆದುಕೊಂಡು ಬಿಡುತ್ತದೆ. ಆದರೆ, ಆದಿಮತೆಯ ಬದುಕನ್ನು ಬದುಕುತ್ತಿರುವ ಗೋಪಾಲಯ್ಯ ತುಂಬಾ ಭಿನ್ನತೆಯ ಹುಡುಕಾಟ ನಡೆಸಿದವರು. ಅವರ ಹುಡುಕಾಟ ಪೂರ್ಣತ್ವದ ಕಡೆ ಹೋಗುವಂತದ್ದು. ಮನುಷ್ಯ ಮತ್ತು ಅವನ ಬದುಕು ಹುಟ್ಟು ಸಾವುಗಳ ನಡುವಿನ ಪ್ರಯಾಣ. ಒಂದು ವೃತ್ತದಂತೆ. ಸೂರ್ಯ-ಚಂದ್ರರು ಇರೊ ಕಡೆಯೇ ಇರುತ್ತಾರೆ, ಅವರಿಗೆ ಯಾವತ್ತು ಪರಿಭ್ರಮಣೆ ಇರಲಿಲ್ಲ. ಚಲನೆ ಇರುವುದು ಅವರನ್ನು ಕೇಂದ್ರೀಕರಿಸಿ ಬದುಕುತ್ತಿರುವ ನಮಗೆ. ಹಾಗಾಗಿ ನಾವು ಚಲಿಸುತ್ತಾ ಇರುತ್ತೇವೆ. ನನಗೆ ಇಂತಹ ಅನೇಕ ವಿಚಾರಗಳು, ಹೊಳಹುಗಳು ಗೋಚರಿಸಿದ್ದು, ಈ ಅರ್ಥ ವಿಸ್ತಾರತೆಯನ್ನು ಮೂಡಿಸಿದ್ದು ಗೋಪಾಲಯ್ಯನ ಪಾತ್ರವೇ. ಅಥವಾ ಗೋಪಾಲಯ್ಯನ ಪಾತ್ರದ ಮೂಲಕ ಕಾರಂತರು ಮಾಡಿಸಿದ ಜೀವನದರ್ಶನ.

'ಇಂಗ್ಲೀಷ್ ಕಾದಂಬರಿಕಾರನೊಬ್ಬ ಹೇಳುತ್ತಾನೆ: ಎಲ್ಲಾ ರೀತಿಯ ಮನುಷ್ಯರನ್ನು ಅವರ ಹಾವ-ಭಾವಗಳನ್ನು ಗಮನಿಸುವುದರಿಂದ ಮಾತ್ರ ಪ್ರಪಂಚವನ್ನು ತಿಳಿದುಕೊಳ್ಳಲು ಸಾಧ್ಯ. (ಸಾಹಿತ್ಯ ಸಂಬಂಧ, ಟಿ.ಪಿ. ಅಶೋಕ ಪು152.)' ಈ ವಿಚಾರಕ್ಕೆ ಸಂಬಂಧಿಸಿದಂತೆ ನಾಡಿನ ಜೀವನಕ್ಕೆ, ಜೀವಕ್ಕಂಟಿದ ಪ್ರಶ್ನೆಯನ್ನು ಗೋಪಾಲಯ್ಯ ತಮ್ಮ ಪಾತ್ರದ ಮೂಲಕ ಪ್ರಸ್ತುತಪಡಿಸಿದ್ದಾರೆ. ಒಂದು ಅನುಭವಕ್ಕೆ ಮತ್ತೊಂದು ಅನುಭವವೇ ಪ್ರಮಾಣವಾಗುತ್ತದೆ, ಹಾಗೇ ಪ್ರಮಾಣವಾದಾಗ ಅಂದಿನ ಗೋಪಾಲಯ್ಯ ಇಂದಿನ ಸನ್ನಿವೇಶಗಳಿಗೂ ಪ್ರತಿಕ್ರಿಯೆ ನೀಡಲು ಸಾಧ್ಯವಾಗುವ ಪಾತ್ರರೂಪವಾಗಿ ಕಾಣಿಸುತ್ತಾರೆ.

ಗೋಪಾಲಯ್ಯ ಅವರ ಜೀವನ ಅನುಭವ ತತ್ವಗಳ ಸಾರವಿದ್ದಂತೆ. ಆ ಕಾರಣಕ್ಕಾಗಿಯೇ ಅವರು ಮತ್ತೆ ಮತ್ತೆ ನನಗೆ ಎದುರಾಗುತ್ತಾರೆ. ಅವರಂತಹ ವ್ಯಕ್ತಿಗಳನ್ನು ಇಂದಿಗೂ ನಾನು ನನ್ನ ಸುತ್ತ ಮುತ್ತಲಿನ ಸಮಾಜದಲ್ಲಿ ನೋಡುತ್ತಲೇ ಇದ್ದೇನೆ. ಮನುಷ್ಯಲೋಕಕ್ಕೆಲ್ಲ ಪ್ರಕೃತಿಯಿಂದ ಕಲಿಯುವ ಪಾಠ ದೊಡ್ಡ ಮೊತ್ತದ್ದು. ಅದು ಕೂಡಿಸಿ ಗುಣಿಸಿ ಕಳೆಯುವ ಲೆಕ್ಕಾಚಾರದ್ದಲ್ಲ ಎನ್ನುವ ನೆಲೆಯೊಂದನ್ನು ಗೋಪಾಲಯ್ಯ ಅರ್ಥ ಮಾಡಿಸುತ್ತಾರೆ. 'ಮನೆಗೆ ಬರುವವರೆಲ್ಲಾ ಅತಿಥಿಗಳು. ಆದರೆ, ಹೇಳದೇ